ಪಾಲಾಗಬಾರದು. ತಮ್ಮಿಬ್ಬರ ಗಾಂಧಿ ದೇವರು ತಮ್ಮನ್ನು ಸಲಹಿಯಾರೆ?

ರಾತ್ರಿಯ ಊಟವನ್ನಿಟ್ಟು ರಪ್ಪನೆ ಬಾಗಿಲು ಬಡಿದುಕೊಂಡಳು ಲಕ್ಷ್ಮಿ. ಇಷ್ಟವಿಲ್ಲದಿದ್ದರೂ ಉಂಡು ಸಾಕ್ಷಿಗಳನ್ನು ಉಲ್ಲೇಖಿಸಿ, ಘಟನೆಯನ್ನು ವಿವರಿಸಿ ಎರಡು ಪತ್ರಗಳನ್ನು ಬರೆದಿಟ್ಟುಕೊಂಡ. ಒಂದು ಸಂಘದ ಮುಖ್ಯಸ್ಥರಿಗೆ, ಮತ್ತೊಂದು ಪೊಲೀಸರಿಗೆ. ತನ್ನ ಬಟ್ಟೆಬರೆ, ಕಾಸು, ಕಂಪ್ಯೂಟರ್ ಎಲ್ಲ ಸೂಟ್‌ಕೇಸಿಗೆ ತುಂಬಿಸಿದ. 'ಜೀವ ಬಿಟ್ಟರೂ ಆದರ್ಶಗಳನ್ನು ಬಿಡಲಾರೆ. ನಿಮ್ಮಿಂದ ದೂರ ಹೋಗುತ್ತಿದ್ದೇನೆ. ಹುಡುಕಬೇಡಿ' ಎಂಬ ಒಕ್ಕಣೆಯುಳ್ಳ ಪತ್ರವನ್ನು ಮೇಜಿನ ಮೇಲಿಟ್ಟ. ನಿದ್ರೆಮಾತ್ರೆ ನುಂಗಿ ಗೊರಕೆ ಹೊಡೆಯುತ್ತಿದ್ದ ಪತ್ನಿಯನ್ನೊಳಗೊಂಡು ಮನೆ ಸುಖನಿದ್ರೆಯಲ್ಲಿತ್ತು. ಮುಂಬಾಗಿಲನ್ನು ಕೊನೆಯ ಬಾರಿ ಲಾಕ್ ಮಾಡಿಕೊಂಡು ಹೊರಬಿದ್ದ ನಿರ್ಭಾವುಕನಾಗಿ. ಮುನ್ನಡೆದು ಪತ್ರಗಳನ್ನು ಅಂಚೆಪೆಟ್ಟಿಗೆಗೆ ಹಾಕಿದ. ವಂದನಾಳನ್ನೊಮ್ಮೆ ಕಾಣಬೇಕೆನಿಸಿತು. ವಾಚ್‌ಮನ್‌ಗೆ ಫೋನ್ ಮಾಡಿ ವಿಷಯ ತಿಳಿಸಿದ. ಹಾಸ್ಟೆಲ್ ಮುಟ್ಟಿದಾಗ ಗಾಂಧಿಪ್ರತಿಮೆಯ ಕೆಳಗೆ ವಾಚ್‌ಮನ್ ಜೊತೆ ವಂದನಾ ಸೂಟ್‌ಕೇಸಿನೊಂದಿಗೆ ಕುಳಿತಿದ್ದಳು. "ಅಂಕಲ್, ನನ್ನನ್ನೂ ಕರೆದುಕೊಂಡು ಹೋಗಿ. ಇಬ್ಬರೂ ಎಲ್ಲಾದರೂ ದೂರ ಹೋಗೋಣ. ನಮ್ಮ ದೇವರ ತಾವಿರುವಲ್ಲಿಗೆ..." ಎಂದು ಅಳುಗೊರಲಿನಲ್ಲಿ ಹೇಳಿದಳು. ವಾಚ್‌ಮನ್, "ಹೌದು ಸಾರ್. ಈಗೆಲ್ಲಾ ಸರಿಯಾಗೇ ನಡೀತಿದೆ. ಆದರೂ ನೀವಿಲ್ಲಾಂದ್ರೆ ಇವಳನ್ನು ಕೊಂದುಬಿಡ್ತಾರೆ" ಎಂದ. ಒಂದು ಕ್ಷಣ ಚಿಂತಾಕ್ರಾಂತನಾಗಿ ಅವಳ ಜೊತೆ ಗಾಂಧೀಜಿಯ ಪಾದಗಳಡಿಯಲ್ಲಿ ಕುಳಿತ. 'ತಾನೇನೋ ಅಲೆಮಾರಿಯ ಹಾಗೆ ಎಲ್ಲೋ ಬದುಕಬಹುದು. ಆದರೆ, ಭವಿಷ್ಯದ ಹೊಸ್ತಿಲಲ್ಲಿ ನಿಂತ ಹರೆಯದ ಹುಡುಗಿಯನ್ನು ಕರೆದೊಯ್ಯುವುದೆಲ್ಲಿಗೆ?' ಎನಿಸಿದರೂ ಮನ 'ಇದೀಗ ಅರವತ್ತೆರೆಡು ವರ್ಷಗಳು ನಿನಗೆ. ಇನ್ನೂ ಹತ್ತು ಹದಿನೈದು ವರ್ಷಗಳಾದರೂ ಬಹುಶಃ ಬದುಕಬಹುದು. ಇನ್ನೂ ಸಾವಿರ ಸಾವಿರ ಹೆಜ್ಜೆಗಳನ್ನು ಹಾಕಬಹುದು ಗಾಂಧೀಜಿಯ ಹೆಜ್ಜೆಗುರುತುಗಳ ಮೇಲೆ. ಈ ಹುಡುಗಿಯನ್ನೂ ದಡ ಸೇರಿಸಬಹುದು. ಮುಂದೆ ಅವಳು ಲಕ್ಷೋಪಲಕ್ಷ ಹೆಜ್ಜೆಗಳನ್ನಿಡಬಹುದು' ಎಂದು ಮಾರ್ನುಡಿಯಿತು. ನಿರ್ಧಾರ ಅಚಲವಾಯಿತು. ವಂದನಾಳ ಕೈಹಿಡಿದು, "ನಡಿ... ಹೊರಡೋಣ" ಎಂದರು. ಅಮೂಲ್ಯ ಕ್ಷಣಗಳಿಗೆ ಸಾಕ್ಷಿಯಾಗಿದ್ದ ವಾಚ್‌ಮನ್ ಮುಗುಳ್ನಕ್ಕ. ಜೊತೆಯಲ್ಲಿ ಗಾಂಧೀಜಿ ಕೂಡ. ಸತ್ಯಪ್ಪ ಗಾಂಧೀಜಿಯ ಕೈಯಲ್ಲಿದ್ದ ಕೋಲು ತೆಗೆದುಕೊಂಡು, "ದಾರಿಯಲ್ಲಿ ನಾಯಿಗಳು ಜಾಸ್ತಿ. ಬೊಗಳಿದರೆ ಓಡಿಸಲು ಇರಲಿ" ಎಂದ. ಇಬ್ಬರೂ ಮುನ್ನಡೆದು ಕಣ್ಮರೆಯಾದರು.

ಮರುದಿನ ಪತ್ರಿಕೆಯಲ್ಲಿ "ಗಾಂಧೀಜಿಯ ಆದರ್ಶಗಳನ್ನು ಸಾರುತ್ತಾ... ಗಾಂಧೀವಾದವನ್ನು ವ್ರತದಂತೆ ಪಾಲಿಸುವ ಸತ್ಯಪ್ಪನಿಗೆ ಪ್ರಶಸ್ತಿ" ಎಂಬ ಸುದ್ದಿ ಪ್ರಕಟವಾಗಿತ್ತು. ನೋಡುತ್ತಲೇ ಸಂತೋಷಗೊಂಡ ಲಕ್ಷ್ಮಿ, ವಸಂತ ಸತ್ಯಪ್ಪನ ಕೋಣೆಗೆ ಬಂದರು. ಅಲ್ಲಿ ಅವನಿರಲಿಲ್ಲ, ಪತ್ರವಿತ್ತು. ಓದಿ ದಿಗ್ಮೂಢರಾದರು. ಪತಿಯ ಆದರ್ಶಗಳು. ಒಳ್ಳೆಯ ಸ್ವಭಾವವನ್ನು ನೆನೆದು ಬಿಕ್ಕಳಿಸಿದಳು ಲಕ್ಷ್ಮಿ. ಇದಾವ ಪರಿವೆಯೂ ಇಲ್ಲದೇ ಗಾಂಧೀವಾದಿಗಳನ್ನು ಹೊತ್ತ ರೈಲು ಗಾಂಧಿಯ ಊರಿನತ್ತ ಓಡುತ್ತಿತ್ತು.




## ಮಧುರಾ ಕರ್ಣಮ್

ಬೆಳಗಾವಿಯವರು. ಬಿ.ಎಸ್ಸಿ, ಎಲ್.ಎಲ್.ಬಿ. ಪದವೀಧರೆ. ಹನ್ನೊಂದು ಕಥಾಸಂಕಲನಗಳು, ಮೂರು ಹಾಸ್ಯ, ಒಂದು ಕವನ ಸಂಕಲನ ಮತ್ತು ಒಂದು ಕಾದಂಬರಿ ಸೇರಿದಂತೆ 16 ಕೃತಿಗಳು ಪ್ರಕಟವಾಗಿವೆ.